
ಕವಿತೆ



ಚೈತ್ರಾ ಶಿವಯೋಗಿಮಠ
ಕಲೆ: ರೂಪಶ್ರೀ ಕಲ್ಲಿಗನೂರು



# ನಾನು ನೀನೋ ಅಥವಾ ನೀನು ನಾನೋ...

ಅವನು:
ನಿನ್ನೆದೆಯ
ಗಿಲಕಿ ಕೇಳುವಷ್ಟು
ಸಮೀಪ ನನ್ನ ಬರಸೆಳೆದುಕೋ
ಹಾಂ!
ಹಾಗೇ
ಇನ್ನೂ ಸಮೀಪ ಇನ್ನೂ
ಕಣ್ಣ ಗೊಂಬೆಗಳಲ್ಲಿನ
ಚಿತ್ರ ಕಲಕಿ ಹೋಗುವಷ್ಟು ಸಮೀಪ
ಬಾ ಹಗುರ
ನನ್ನುಸಿರ ಬಿಸುಪು
ನಿನ್ನ ಮೈ ಮನಗಳಲ್ಲಿ ಹರಿದಾಡಲಿ

ಕೇಳಿಲ್ಲಿ,
ನನ್ನ ಸ್ಪರ್ಶ
ನಿನ್ನ ಹೂಪಕಳೆಗಳ ತೋಯ್ಯಿಸಲಿ
ಅರೇ!
ನಾನು ನೀನೋ
ಅಥವಾ
ನೀನು ನಾನೋ
ಎನ್ನುವ ಗೊಂದಲಕ್ಕೆ
ಸಮಾಧಾನವೇ ಸಿಗದಷ್ಟು
ತುಸು ಮೃದುವಾಗಿ
ಒಂದೀಟು ಬಿರುಸಾಗಿ ಸ್ಪರ್ಶಿಸುವೆ
ನನ್ನ
ಈ ಮೈಗಂಧ
ನಿನ್ನ ಉಚ್ಛ್ವಾಸಗಳ ತುಂಬಲಿ
ಇನ್ನೂ
ಪ್ರೀತಿಸು ನನ್ನ
ಹೀಗೆ... ಹೀಗೇ...
ಈ ಆತ್ಮಗಳ
ಅವಿಚ್ಛಿನ್ನ ಕೂಡುವಿಕೆಯ ಹಿತದಲಿ
ನೀ ನನ್ನ ಇನ್ನೂ ಪ್ರೀತಿಸು!

ಅವಳು:
ಈಗೀಗ ಇಲ್ಲಿ
ಪ್ರತಿ ಸಂಭ್ರಮವು
ಮೊದಲ ಸಡಗರದಂತೆ ಅಲ್ಲವೇ
ನಿನ್ನ ಕಂಗಳ ಪ್ರಭೆ
ತುಂಬಿಕೊಳ್ಳುವ ತವಕ
ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ
ಹೀಗೆ ನಾನು
ನಿನ್ನ ಸದಾ ಧ್ಯಾನಿಸಲು
ಧೇನಿಸಲು ದೂಡುವ
ಈ ನಿನ್ನ ಪರಿಗೆ ಏನೆನ್ನಲಿ?
ನೋಡಿಲ್ಲಿ
ಈ ಸೊಡರು ಸದಾ ಉರಿಯುತ್ತಲಿದೆ
ನಿನ್ನ ಕಾಣದೇ
ಒಂದೇ ಒಂದು ತೊಟ್ಟು ಕುಡಿಯದೇ ಕಾದಿರುವೆ
ಈ ತೃಷೆಯೀಗ
ನನಗೆ ರೂಢಿಯಾಗಿ ಹೋಗಿದೆ
ಎನ್ನುವ ಆತಂಕ ಮಾತ್ರ ನನ್ನದು!

